# ಶ್ರೀಚೈತನ್ಯ ಮಹಾಪ್ರಭು – ೭

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

## ಶ್ರೀಚೈತನ್ಯರ ದಕ್ಷಿಣಭಾರತ ಯಾತ್ರೆ

ಪುರೀಧಾಮದಲ್ಲಿ ಶ್ರೀಚೈತನ್ಯರ ವಾಸ್ತವ್ಯ ಬಹಳ ಕಡಿಮೆ ಅವಧಿಯದಾಗಿತ್ತು. ಕೆಲವರ ಪ್ರಕಾರ ನಾಲ್ಕು ತಿಂಗಳು, ಮತ್ತೆ ಕೆಲವರ ಪ್ರಕಾರ ಕೇವಲ ಹದಿನೈದು ದಿನಗಳ ಕಾಲ ಅವರು ಅಲ್ಲಿ ಉಳಿದುಕೊಂಡಿದ್ದರು. ಈಗ ದಕ್ಷಿಣ ಪ್ರಾಂತ್ಯಗಳ ತೀರ್ಥ ಯಾತ್ರೆಗೆ ಒಬ್ಬರೇ ಹೋಗಬೇಕೆಂದು ಅವರು ಸಂಕಲ್ಪ ಮಾಡಿದರು. ಮೇಲ್ನೋಟಕ್ಕೆ ತಮ್ಮ ಅಣ್ಣ ವಿಶ್ವರೂಪರನ್ನು ಹುಡುಕುವುದಕ್ಕೆ ಈ ಪ್ರವಾಸವೆಂದಿದ್ದರೂ ಭಗವತ್ಪ್ರೇಮದ ಧರ್ಮವನ್ನು ದಕ್ಷಿಣ ದೇಶದಲ್ಲಿ ಪ್ರಸಾರ ಮಾಡುವುದೇ ಈ ತೀರ್ಥಯಾತ್ರೆಯ ನೈಜ ಉದ್ದೇಶವಾಗಿತ್ತು. ಏಪ್ರಿಲ್ ೧೦, ೧೫೧೦ರಂದು ಆರಂಭವಾದ ಅವರ ತೀರ್ಥಯಾತ್ರೆಯು ಮುಗಿಯಲು ಎರಡು ವರ್ಷಗಳ ಕಾಲ ಹಿಡಿಯಿತು. ನವದ್ವೀಪದ ಅವರ ಭಕ್ತರಾದ ನಿತ್ಯಾನಂದ ಮುಂತಾದವರು ಹಾಗೂ ಹೊಸದಾಗಿ ಪರಿವರ್ತನೆಗೊಂಡ ಸಾರ್ವಭೌಮರೇ ಮೊದಲಾದವರು ಶ್ರೀಚೈತನ್ಯರ ನಿರ್ಧಾರದಿಂದ ಬಹಳ ದುಃಖಿಗೊಂಡರು. ಆದರೆ ಬೆಣ್ಣೆಯಂತಹ ಮೃದುವಾದ ಮನಸ್ಸುಳ್ಳ ಚೈತನ್ಯರು ಒಮ್ಮೆ ನಿರ್ಧರಿಸಿದ ಮೇಲೆ ವಜ್ರದಂತೆ ಕಠಿಣರಾಗಿಬಿಡುತ್ತಿದ್ದರು. ಕೃಷ್ಣದಾಸ ಎಂಬ ಒಬ್ಬನೇ ಅನುಯಾಯಿಯೊಡನೆ ತಮ್ಮ ಕಮಂಡಲು ಮತ್ತು ಕೌಪೀನಗಳನ್ನು ಮಾತ್ರ ತೆಗೆದುಕೊಂಡು ಅವರು ಹೊರಟುಬಿಟ್ಟರು. ಸಾರ್ವಭೌಮರು ಅವರನ್ನು ದಾರಿಯಲ್ಲಿ ರಾಮಾನಂದ ರಾಯ್ ಎನ್ನುವವರನ್ನು ಭೇಟಿ ಮಾಡುವಂತೆ ಕೇಳಿಕೊಂಡರು. ರಾಮಾನಂದ ರಾಯ್ ಅವರು ಗೋದಾವರಿ ನದಿಯ ದಡದಲ್ಲಿದ್ದ ವಿದ್ಯಾನಗರ ಎಂಬಲ್ಲಿ, ಕಳಿಂಗದೇಶದ ರಾಜನಾದ ಗಜಪತಿ ಪ್ರತಾಪ ರುದ್ರನ ಕೆಳಗೆ ರಾಜ್ಯಪಾಲರಾಗಿದ್ದರು. ಅವರೇನೂ ಬ್ರಾಹ್ಮಣ ಪಂಡಿತರಲ್ಲ, ಆದರೆ ಅವರು ಅಪೂರ್ವ ವ್ಯಕ್ತಿತ್ವವುಳ್ಳ ಶ್ರೇಷ್ಠ ಭಕ್ತರೆಂದು ಸಾರ್ವಭೌಮರು ಚೈತನ್ಯರಿಗೆ ತಿಳಿಸಿದರು.

ಚೈತನ್ಯರು ಪೂರ್ವದ ಕರಾವಳಿಯುದ್ದಕ್ಕೂ ಸಂಚರಿಸಿ, ಸೇತುಬಂಧ ರಾಮೇಶ್ವರ ಮತ್ತು ಕನ್ಯಾಕುಮಾರಿಯವರೆಗೂ ಬಂದಿದ್ದರು. ಅನಂತರ ಮಧ್ಯಭಾರತ, ಪಶ್ಚಿಮ ಭಾರತ ಮತ್ತು ಗಂಗಾ ನದಿಯ ಕಣಿವೆಯ ಪ್ರದೇಶಗಳಲ್ಲಿ ಸಂಚರಿಸಿ, ಪುರೀಧಾಮಕ್ಕೆ ಹಿಂತಿರುಗಿದರು. ಮಾರ್ಗಮಧ್ಯದಲ್ಲಿ ಅನೇಕ ಗ್ರಾಮಗಳನ್ನು ಅವರು ಹಾದುಹೋದರು. ಅದಲ್ಲದೆ, ಐವತ್ತೈದು ಬಹು ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ಅವರು ವಾಸ್ತವ್ಯ ಹೂಡಿದರು. ಅವರ ಜೊತೆಗಿದ್ದ ಕೃಷ್ಣದಾಸನು ಶ್ರೀಚೈತನ್ಯರ ಪ್ರಯಾಣದ ವಿವರಗಳನ್ನು ದಾಖಲಿಸಿದ್ದಾನೆ. ಇದರಿಂದ ಮೇಲಿನ ವಿವರಗಳು ನಮಗೆ ತಿಳಿದುಬರುತ್ತವೆ. ಎಲ್ಲ ಕಡೆಯೂ ಅವರ ವ್ಯಕ್ತಿತ್ವವು ಜನರನ್ನು ಗುಂಪುಗುಂಪಾಗಿ ಆಕರ್ಷಿಸಿತು. ಅವರೆಲ್ಲರಲ್ಲೂ ಶ್ರೀಚೈತನ್ಯರು ಶ್ರೀಕೃಷ್ಣನಾಮದ ಮಧುರ ಸಂಕೀರ್ತನೆಯಿಂದ ಮತ್ತು ತಮ್ಮ ಭಕ್ತಿಯ ನರ್ತನದಿಂದ ಸ್ಫೂರ್ತಿಯನ್ನು ತುಂಬಿದರು. ನಾದಿಯಾದಲ್ಲಿ ಅವರು ಪ್ರಕಟಿಸಿದ್ದಕ್ಕಿಂತಲೂ ಹೆಚ್ಚಿನ ಆಕರ್ಷಣಾ ಶಕ್ತಿ ಈ ಪ್ರಯಾಣದ ಸಮಯದಲ್ಲಿ ಅವರಲ್ಲಿ ವ್ಯಕ್ತವಾಗುತ್ತಿತ್ತು ಎಂದು ಹೇಳಬಹುದು. ಕೆಲವು ಸ್ಥಳಗಳಲ್ಲಂತೂ ಗ್ರಾಮಕ್ಕೆ ಗ್ರಾಮವೇ ಶ್ರೀಕೃಷ್ಣಸಂಕೀರ್ತನೆಯಲ್ಲಿ ತಲ್ಲೀನವಾಗಿ ನರ್ತಿಸುತ್ತಿತ್ತು. ಆ ಸಮಯದಲ್ಲಿ ಆಯಾ ಸ್ಥಳದ ಗ್ರಾಮಸ್ಥರ ಮಧ್ಯೆ ಇದ್ದ ಯಾವ ಜಾತಿ ಕುಲ ಭೇದಗಳೂ ಸಂಕೀರ್ತನೆಗೆ ಅಡ್ಡಿಬರಲಿಲ್ಲ. ಅವರೆಲ್ಲರೂ ನಿಜವಾದ ವೈಷ್ಣವರಾಗಿ ಪರಿವರ್ತನೆ ಹೊಂದಿದರು. ಕೆಲವು ಪ್ರಮುಖ ಶೈಕ್ಷಣಿಕ ಕೇಂದ್ರಗಳು ಮತ್ತು ಮತಪಂಗಡಗಳ ಮುಖ್ಯಕೇಂದ್ರಗಳಲ್ಲಿ ಅಲ್ಲಿನ ಸಿದ್ಧಾಂತ ಪ್ರತಿಪಾದಕರಾದ ವಿದ್ವಾಂಸರನ್ನು ಭೇಟಿಯಾಗಿ, ಅವರೆಲ್ಲರೂ ರಾಧಾಕೃಷ್ಣರಲ್ಲಿ ಕೇಂದ್ರೀಕೃತವಾದ ತಮ್ಮ ಭಗವತ್‌ಪ್ರೇಮ ಸಿದ್ಧಾಂತವನ್ನು ಗೌರವಿಸುವಂತೆ ಮಾಡಿದರು. ಚೈತನ್ಯರು ಬೋಧಿಸುತ್ತಿದ್ದ ಸಿದ್ಧಾಂತದಲ್ಲಿ ಜಾತಿವೈಷಮ್ಯಕ್ಕೆ ಸ್ಥಾನವಿರಲಿಲ್ಲ; ವಿದ್ವತ್ತು ಮತ್ತು ತರ್ಕಗಳ ಪ್ರಾಮುಖ್ಯತೆಯನ್ನು ಅದು ಕಡೆಗಣಿಸಿತ್ತು; ಬಹಳ ಎಚ್ಚರಿಕೆಯಿಂದ ಮಾಡಬೇಕಾದ ಪೂಜಾದಿಗಳು ಮತ್ತು ಆಚರಣೆಗಳಿಗೂ ಮಹತ್ವ ಇರಲಿಲ್ಲ. ಚೈತನ್ಯರ ಈ ಸುದೀರ್ಘಯಾತ್ರೆಯ ಕೆಲವು ಮಹತ್ವದ ಘಟನೆಗಳನ್ನಷ್ಟೇ ಇಲ್ಲಿ ಉಲ್ಲೇಖ ಮಾಡಲು ಸಾಧ್ಯ.

## ರಾಮಾನಂದ ರಾಯ್ ಅವರೊಡನೆ ಭೇಟಿ

ಶ್ರೀಚೈತನ್ಯರ ತೀರ್ಥಯಾತ್ರೆಯ ಸಮಯದಲ್ಲಿ ಜರುಗಿದ ಬಹು ಮುಖ್ಯವಾದ ಘಟನೆಯೆಂದರೆ ವಿದ್ಯಾನಗರದಲ್ಲಿ ಅವರು ರಾಮಾನಂದ ರಾಯ್ ಅವರನ್ನು ಕಂಡದ್ದು. ವಾಸುದೇವ ಸಾರ್ವಭೌಮರು ಹಾಗೆ ಮಾಡಬೇಕೆಂದು ಅವರಿಗೆ ಸಲಹೆ ಕೊಟ್ಟಿದ್ದರಷ್ಟೆ. ವಿದ್ಯಾನಗರವು ಈಗಿನ ರಾಜಮಹೇಂದ್ರಿಯ ಪೂರ್ವದಿಕ್ಕಿನಲ್ಲಿ ಆಯಕಟ್ಟಿನ ಸ್ಥಳದಲ್ಲಿತ್ತು. ರಾಮಾನಂದ ರಾಯ್ ಅದರ ರಾಜ್ಯಪಾಲರಾಗಿದ್ದರು. ಚೈತನ್ಯರು ರಾಮಾನಂದ ರಾಯರನ್ನು ಭೇಟಿಮಾಡಿದ್ದು ಪವಿತ್ರ ಗೋದಾವರಿ ನದಿಯ ಸ್ನಾನಘಟ್ಟದಲ್ಲಿ. ಆಗ ತಾನೇ ಅವರು ನದಿಯಲ್ಲಿ ಸ್ನಾನ ಮಾಡಿ ವಿಶ್ರಮಿಸಿಕೊಳ್ಳುತ್ತಿದ್ದರು. ಶ್ರೀಚೈತನ್ಯರ ಆಧ್ಯಾತ್ಮಿಕ ಪ್ರಭೆ ಒಡನೆಯೆ ಅವರನ್ನು ಆಕರ್ಷಿಸಿತು. ಆ ಸಂನ್ಯಾಸಿಯ ಬಳಿಸಾರಿದ ರಾಯ್

ವಿನಯದಿಂದ ಅವರಿಗೆ ನಮಸ್ಕರಿಸಿದರು. ಅಲ್ಪಕಾಲದಲ್ಲಿಯೆ ಅವರಿಬ್ಬರ ನಡುವೆ ಮಾತಿಗೆ ಮೊದಲಾಯಿತು. ಒಬ್ಬರು ಮತ್ತೊಬ್ಬರ ಅಗಾಧ ಜ್ಞಾನದ ಮತ್ತು ಅಪೂರ್ವ ಭಕ್ತಿಯ ಪ್ರಕಾಶವನ್ನು ಕಂಡುಕೊಂಡರು. ಅದಕ್ಕಾಗಿ ಪರಸ್ಪರ ಪ್ರಶಂಸೆ ಮಾಡಿಕೊಂಡರು ಕೂಡ. ಚೈತನ್ಯರಲ್ಲಿ ಅಡಗಿದ್ದ ದಿವ್ಯತೆಯನ್ನು ಗುರುತಿಸಿದ ರಾಯ್ ವಿದ್ಯಾನಗರದಲ್ಲಿ ಹತ್ತು ದಿನಗಳಾದರೂ ಇರುವಂತೆ ಅವರನ್ನು ಕೇಳಿಕೊಂಡರು. ಚೈತನ್ಯರು ಅದಕ್ಕೆ ಒಪ್ಪಿದರು.

ತಮ್ಮ ಮಾತುಕತೆಯ ಮಧ್ಯೆ ಶ್ರೀಚೈತನ್ಯರು, ರಾಮಾನಂದ ರಾಯ್ ಅವರಿಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು. ಆ ಮೂಲಕ, ಅವರನ್ನು ನೆಪವಾಗಿಟ್ಟುಕೊಂಡು ಶ್ರೀಕೃಷ್ಣಭಕ್ತಿಯ ಸೂಕ್ಷ್ಮವಿಚಾರಗಳನ್ನು ಲೋಕಕ್ಕೆ ಮನದಟ್ಟುಮಾಡಿಕೊಟ್ಟರು. ಭಕ್ತಿಭಾವನೆಯ ಬೆಳವಣಿಗೆಯ ಕೆಳಹಂತದಿಂದ ಆರಂಭಿಸಿ, ರಾಧೆ ಮತ್ತು ಆಕೆಯ ಸಖಿಯರು ಸ್ವಾರ್ಥಭಾವನೆಯ ಲವಲೇಶವೂ ಇಲ್ಲದೆ ಶ್ರೀಕೃಷ್ಣನತ್ತ ತೋರಿದ ಪರಮಪ್ರೇಮದ ಅತ್ಯುನ್ನತ ಘಟ್ಟದವರೆಗೂ ರಾಮಾನಂದರಿಗೆ ಶ್ರೀಚೈತನ್ಯರು ತಿಳಿಸಿಕೊಟ್ಟರು. ಮೊದಲಿಗೆ ಶ್ರೀಚೈತನ್ಯರು "ಭಕ್ತಿಯನ್ನು ಪಡೆಯುವ ಸಾಧನ ಯಾವುದು?" ಎಂದು ಕೇಳಿದರು. ನಮ್ಮೆಲ್ಲ ಕರ್ತವ್ಯಗಳನ್ನೂ ಭಗವಂತನಿಗೆ ಸಮರ್ಪಿಸುವುದೇ ಭಕ್ತಿಯ ಗಳಿಕೆಗೆ ಸಾಧನವೆಂದು ರಾಮಾನಂದರು ಉತ್ತರವಿತ್ತರು. ಇನ್ನೂ ಆಳವಾಗಿ ಯೋಚಿಸಿರೆಂದು ಶ್ರೀಚೈತನ್ಯರು ಹೇಳಲು, ಭಗವತ್ಪ್ರೇಮದ ಸಲುವಾಗಿ ಸ್ವಜಾತಿಯ ಕರ್ತವ್ಯಗಳನ್ನೂ ತ್ಯಜಿಸಿ ಭಗವಂತನಲ್ಲಿ ಶರಣುಹೋಗುವುದು ಮಾತ್ರವೇ ಸಾಧನವೆಂದು ರಾಯ್ ಉತ್ತರಿಸಿದರು. ಮತ್ತೂ ಆಳವಾಗಿ ಚಿಂತಿಸಲು ಆದೇಶಿಸಿದರು, ಶ್ರೀಚೈತನ್ಯರು. ಆಗ ರಾಮಾನಂದರು ಶ್ರೀಕೃಷ್ಣಭಕ್ತಿಯ ಗಭೀರತೆಯನ್ನು ಪ್ರಕಟಗೊಳಿಸುವ ಹಲವು ವಿವರಣೆಗಳನ್ನು ಕೊಡಲಾರಂಭಿಸಿದರು. ಈ ಹಂತದಲ್ಲಿ, ಭಗವಂತನ ಮಾಹಾತ್ಮ್ಯದ ಅರಿವು ಭಕ್ತಿಗೆ ಆವಶ್ಯಕ ಎಂಬ ಅಂಶವನ್ನು ಕೂಡ ನಿರಾಕರಿಸಿದರು. ಏಕೆಂದರೆ ಪರಿಶುದ್ಧ ಪ್ರೇಮ ಕೇವಲ ವಿಸ್ಮಯದಿಂದ ಕೂಡಿದ್ದು, ಅರಿವು ವಿಸ್ಮಯವನ್ನು ಮುಸುಕಾಗಿಸುತ್ತದೆ. ಅದಲ್ಲದೆ, ಜ್ಞಾನವೆಂದರೆ ವಿಶ್ಲೇಷಣೆ; ಪ್ರೇಮವಾದರೋ ಕೇವಲ ಆಕರ್ಷಣೆ. ಭಗವಂತನು ನಮ್ಮ ಆತ್ಮದ ಆತ್ಮ. ಹೀಗಾಗಿ ಪ್ರೇಮವೆಂಬುವುದು ಅತ್ಯಂತ ಸನಿಹದ ಭಾವನೆಯಾಗಿರಬೇಕು. ರಾಮಾನಂದ ರಾಯ್ ಬಲರಾಮನಿಗೆ ಶ್ರೀಕೃಷ್ಣನ ಮೇಲಿದ್ದ ಭ್ರಾತೃಪ್ರೇಮವೇ ಎಲ್ಲಕ್ಕಿಂತ ಶ್ರೇಷ್ಠವಾದ ಪ್ರೇಮವೆಂದು ಹೇಳಿದರು. ಇನ್ನೂ ಆಳವಾಗಿ ಯೋಚಿಸಿರೆಂದು ಶ್ರೀಚೈತನ್ಯರು ನುಡಿದರು. ಅದಕ್ಕೆ ರಾಯ್, ನಂದ ಮತ್ತು ಯಶೋದೆಯರು ಶ್ರೀಕೃಷ್ಣನ ಮೇಲಿಟ್ಟಿದ್ದ ವಾತ್ಸಲ್ಯಭಾವ ಅದಕ್ಕಿಂತ ಉನ್ನತವಾದದ್ದು ಎಂದು ನುಡಿದರು. ಇದಕ್ಕಿಂತಲೂ ಉನ್ನತವಾದ ಪ್ರೇಮಭಾವನೆ ಇದೆಯೇ ಎಂದು ಮತ್ತೆ ಪ್ರಶ್ನಿಸಿದಾಗ, ರಾಮಾನಂದರು ರುಕ್ಮಿಣಿ ಮುಂತಾದ ಪತ್ನಿಯರಿಗೆ ಶ್ರೀಕೃಷ್ಣನ ಮೇಲಿದ್ದ ಮಧುರಭಾವ ಎಂದು ಉತ್ತರಿಸಿದರು. ಈ ಉತ್ತರದಿಂದಲೂ ಶ್ರೀಚೈತನ್ಯಪ್ರಭುವು ತೃಪ್ತಿಗೊಳ್ಳಲಿಲ್ಲ. ಆಗ ರಾಯ್, ಗೋಪಿಯರು ಶ್ರೀಕೃಷ್ಣನನ್ನು ಗುಟ್ಟಾಗಿ ಪ್ರೀತಿಸುತ್ತಿದ್ದರು; ಅದೇ ಮತ್ತೂ ಆಳವಾದ ಪ್ರೇಮಭಕ್ತಿ ಎಂದರು. ಆ ಬಗೆಯ ಪ್ರೇಮಭಾವನೆಯಿರುವ ಸ್ತ್ರೀಯು ತನ್ನ ಪ್ರಿಯತಮನ ಬಳಿಸಾರುವಾಗ, ಆತನ ಅಂತಸ್ತು, ಆತನು ತನ್ನವನೆಂಬ ಭಾವನೆ, ಸಮಾಜದ ಟೀಕೆ– ಈ ಸಂಗತಿಗಳಿಗೆ ಗಮನ ಕೊಡದೆ, ತನ್ನನ್ನು ತಾನು ಅವನಿಗೆ ಒಪ್ಪಿಸಿಕೊಂಡುಬಿಡುತ್ತಾಳೆ. ಹೀಗೆಯೇ ಭಕ್ತನಾದವನು ಶ್ರೀಕೃಷ್ಣನಲ್ಲಿ ತನ್ನನ್ನು ಇಡಿಯಾಗಿ ಸಮರ್ಪಿಸಿಕೊಳ್ಳಬೇಕು. ಈಗ ಶ್ರೀಚೈತನ್ಯರು "ಇನ್ನೂ ಉನ್ನತವಾದ ಪ್ರೇಮಭಾವನೆಯಿರಲು ಸಾಧ್ಯವೇ ಎಂದು ನಿನ್ನ ಹೃದಯದಲ್ಲಿ ಹುಡುಕಿ ನೋಡು" ಎಂದು ರಾಮಾನಂದರಿಗೆ ಹೇಳುತ್ತಾರೆ. ಆಗ ರಾಯ್, ರಾಧೆಗೆ ಶ್ರೀಕೃಷ್ಣನ ಮೇಲಿದ್ದ ಪ್ರೇಮವೇ ಅತ್ಯಂತ ಶ್ರೇಷ್ಠವಾದುದು ಎಂದು ಹೇಳುತ್ತಾರೆ. ರಾಧೆಯ ಪ್ರೀತಿಯಲ್ಲಿ ಸ್ವಾರ್ಥದ ಲವಲೇಶವೂ ಇರಲಿಲ್ಲ. ಕೃಷ್ಣನಿಗೆ ಹೇಗೆ ಸಂತೋಷ ನೀಡಬಹುದೆಂದು ಮಾತ್ರ ಅವಳು ಯೋಚಿಸುತ್ತಿದ್ದಳು. ಅದನ್ನು ಸಾಧಿಸುವಲ್ಲಿ ತಾನು ಎದುರಿಸಬೇಕಾಗಿ ಬರುವ ಸಮಾಜದ ಅವಹೇಳನವಾಗಲಿ ಅನುಭವಿಸಬೇಕಾಗಿ ಬರುವ ನೋವುಗಳಾಗಲಿ ಅವಳನ್ನು ವಿಚಲಿತಗೊಳಿಸಲಿಲ್ಲ. ಅವಳು ಹೀಗೆ ಹಾಡುತ್ತಿದ್ದಳು: " ಸಖಿಯರೇ, ಅವನಿಗೊಮ್ಮೆ ಜ್ಞಾಪಿಸಿ, ಅವನು ನನ್ನನ್ನು ಮರೆತಿರಬಹುದು. ಮೊದಲು ನಾವಿಬ್ಬರು ಕಂಡಾಗ ಆದದ್ದು ತೀವ್ರ ಪ್ರೇಮ. ಇದು ಎಲ್ಲಿಗೆ ಒಯ್ಯುವುದೋ ನಾ ಕಾಣೆ; ಏಕೆಂದರೆ ನನ್ನಲ್ಲಿ ಆ ಪ್ರೇಮ ಬೆಳೆಯುತ್ತಲೇ ಇದೆ. ಸ್ತ್ರೀ–ಪುರುಷರು ಪ್ರಣಯಿಗಳಾಗುವರೆಂದು ಲೋಕ ತಿಳಿಯುವುದು. ಆದರೆ ನನ್ನ ಮನಃಸ್ಥಿತಿಯೇ ಬೇರೆ. ಅವನು ಪುರುಷ, ನಾನು ಸ್ತ್ರೀ ಎಂಬ ಭಾವನೆಯೇ ನನಗಿಲ್ಲ. ಹೀಗಾಗಿ ಶ್ರೀಕೃಷ್ಣನ ಮೇಲೆ ನನಗೇಕೆ ಪ್ರೇಮವುಂಟಾಯಿತೆಂಬುದನ್ನು ಹೇಳಲಾರೆ."

**ಕೃಷ್ಣ–ರಾಧೆಯರ ತತ್ತ್ವ**

ಶ್ರೀಚೈತನ್ಯರು ರಾಮಾನಂದರನ್ನು ಅಲ್ಲಿಗೇ ಬಿಡಲಿಲ್ಲ. ಶ್ರೀಕೃಷ್ಣತತ್ತ್ವದ ರಹಸ್ಯವನ್ನು ಹೇಳುವಂತೆ ಒತ್ತಾಯಿಸಿದರು. ಅದಕ್ಕೆ ರಾಮಾನಂದರು ಹೇಳಿದ್ದು ಹೀಗೆ: ಕೃಷ್ಣನೇ ಪರಬ್ರಹ್ಮ, ಎಲ್ಲ ಅವತಾರಗಳ ಮೂಲ, ಸೃಷ್ಟಿಕರ್ತ. ಅವನು ಗೋಲೋಕವೆಂಬ ಧಾಮದಲ್ಲಿ ಶಾಶ್ವತವಾಗಿ ನೆಲೆಸಿರುವನು. ಆತನ ಶರೀರ ಸತ್–ಚಿತ್–ಆನಂದಗಳಿಂದ ಕೂಡಿದ್ದಾಗಿದೆ. ವೃಂದಾವನದಲ್ಲಿ ಅವನು ಯೌವನದ ಕಾಂತಿಯಿಂದ ಶೋಭಿಸುತ್ತ ಸಾಕ್ಷಾತ್ ಮನ್ಮಥನಂತೆ ಅನುಗಾಲವೂ ಕಂಗೊಳಿಸುತ್ತಿರುತ್ತಾನೆ. ಪ್ರೇಮವೊಂದೇ ಆತನ ಆರಾಧನೆಗೆ ಇರುವ ಏಕಮಾತ್ರ ಮಂತ್ರ. ಅವನಿಗೆ ಅರ್ಪಿಸುವ ನಿವೇದನೆಯೂ ಪ್ರೇಮಪೂರಿತವಾಗಿರಬೇಕು. ವೃಂದಾವನದ ಎಲ್ಲ ಪುರುಷರ–ಮಹಿಳೆಯರ, ಸ್ಥಾವರ–ಜಂಗಮ ವಸ್ತುಗಳ

ಹೃದಯಗಳನ್ನು ಅವನ ಪರಮಪ್ರೇಮ ಸೆಳೆದುಬಿಡುವುದು. ಅವನು ಮನ್ಮಥನಿಗೇ ಮನ್ಮಥ, ಸಕಲರ ಹೃದಯವಿಜೇತ (ಭಾಗವತ ೧೦.೩೨.೨). ಅವನ ಅನುಪಮ ಸೌಂದರ್ಯ ಅವನನ್ನೇ ಆಕರ್ಷಿಸುವುದು; ಹೀಗಾಗಿ ತನ್ನನ್ನೇ ತಾನು ಆಲಂಗಿಸಲು ಅವನು ಇಚ್ಛಿಸುವನು. ಹೀಗಿದೆ ಶ್ರೀಕೃಷ್ಣನ ಮನೋಹರ ರೂಪ.

ಅವರು ರಾಧೆಯ ಬಗ್ಗೆ ಹೇಳಿದ್ದು ಹೀಗೆ: ಶ್ರೀಕೃಷ್ಣನ ಶಕ್ತಿಗಳು ಅನಂತ. ಅವುಗಳಲ್ಲಿ ಮೂರು ಬಹಳ ಪ್ರಮುಖವಾದುವು. ಅವೆಂದರೆ, ಚಿತ್‌ಶಕ್ತಿ, ಮಾಯಾಶಕ್ತಿ ಮತ್ತು ಜೀವಶಕ್ತಿ. ಮೊದಲನೆಯದು ಅವನ ಅಂತರಂಗದ ಶಕ್ತಿಯಾದ ಸ್ವರೂಪ ಶಕ್ತಿ. ಎರಡನೆಯದು ಸೃಷ್ಟಿಕಾರ್ಯದಲ್ಲಿ ಉಪಯೋಗಿಸುವ ಮಾಯಾಶಕ್ತಿ. ಮೂರನೆಯದು ಜೀವಭಾವದಲ್ಲಿ ವ್ಯಕ್ತವಾಗುವ ಅಲ್ಪಶಕ್ತಿ. ಕೃಷ್ಣನ ಸ್ವರೂಪಶಕ್ತಿಗೆ ಮೂರು ಮುಖಗಳು: ಸತ್, ಚಿತ್, ಆನಂದ. 'ಆನಂದ' ಅಂಶವನ್ನು **ಹ್ಲಾದಿನೀ** ಎಂದರೆ ಪರಮಾನಂದವನ್ನು **ಕೊಡುವಂಥದು** ಎಂದು ಕರೆಯುತ್ತಾರೆ. 'ಸತ್' ಅಂಶವನ್ನು **ಸಂಧಿನೀ** ಅಂದರೆ ಸೃಷ್ಟಿಮಾಡುವುದು ಎಂದು ಹೆಸರಿಸುವರು. 'ಚಿತ್' ಅಂಶವಾದ **ಸಂವಿತ್** ಜೀವರೂಪ ದಲ್ಲಿ ಕಾಣಿಸಿಕೊಳ್ಳುವುದು. ಕೃಷ್ಣನನ್ನು ಆನಂದಭಾವದಲ್ಲಿಡು ವುದೇ ಹ್ಲಾದಿನೀ. ಕೃಷ್ಣನೇ ಆನಂದರೂಪನಾದರೂ ಅವನು ತನ್ನ ಆನಂದಾಂಶವನ್ನು ಸ್ವಯಂ ಅನುಭವಿಸುತ್ತ ಮುದಗೊಳ್ಳು ತ್ತಾನೆ. ಕೃಷ್ಣನ ಈ ಹ್ಲಾದಿನೀ ಅಂಶವು ಅವನ ಭಕ್ತರಿಗೂ ಅಪಾರ ಸಂತೋಷವನ್ನು ಉಂಟುಮಾಡುವ ಶಕ್ತಿಯಾಗಿದೆ. ಪ್ರೇಮವೇ ಹ್ಲಾದಿನಿಯ ಸಾರಸರ್ವಸ್ವ, ಪ್ರೇಮವೆಂದರೆ ಮಹಾ ಭಾವವೆಂಬ ಅತ್ಯುನ್ನತ ಭಾವದಲ್ಲಿ ಕೊನೆಗೊಳ್ಳುವ ಮಧುರ ಭಾವಗಳ ಸರಣಿ. ರಾಧೆಯು ಆ ಮಹಾಭಾವದ ಅಭಿವ್ಯಕ್ತರೂಪ. ಹೀಗಾಗಿ ಹ್ಲಾದಿನೀ ಶಕ್ತಿಯ ಉನ್ನತ ಪ್ರಕಾಶ ಅವಳ ವ್ಯಕ್ತಿತ್ವದಲ್ಲಿ ಒಡಮೂಡಿತ್ತು.

**ಸಖಿಯರ ಕಲ್ಪನೆ**

ರಾಧಾ–ಕೃಷ್ಣರ ಲೀಲೆ ಎಂಬುದು ಅತ್ಯಂತ ಗಹನವಾದ ಒಂದು ತತ್ತ್ವ. ದಾಸ್ಯ, ವಾತ್ಸಲ್ಯ ಮುಂತಾದ ಭಾವಗಳಿಂದ ಇದನ್ನು ಅರ್ಥಮಾಡಿಕೊಳ್ಳಲು ಆಗದು. ರಾಧೆಯ ಸಖಿಯರು ಮಾತ್ರ ಅದನ್ನು ಅರ್ಥಮಾಡಿಕೊಳ್ಳುವರು. ಶ್ರೀಕೃಷ್ಣನನ್ನು ಸಖೀ ಭಾವದಿಂದ ಆರಾಧಿಸುವವರು ಮಾತ್ರವೇ ಈ ದಿವ್ಯಲೀಲೆಯ ಪೂರ್ಣ ವಿಕಾಸದ ಆನಂದವನ್ನು ಅನುಭವಿಸಬಲ್ಲರು. ಆದ್ದ ರಿಂದ ಭಕ್ತಿಮಾರ್ಗದ ಪ್ರವರ್ತಕರು ರಾಧಾಕೃಷ್ಣರ ಪ್ರೇಮ ಮಿಲನಕ್ಕೆ ಸಾಕ್ಷಿಯಾಗಿದ್ದ ಸಖಿಯರ ಭಾವವನ್ನು ಅನುಸರಿಸು ವುದರ ಮೂಲಕ ಭಕ್ತಿಸಾಧನೆಯನ್ನು ಮಾಡಬೇಕೆಂದು ಹೇಳುವರು.

ಸಖಿಯರ ಭಾವವು ವರ್ಣನಾತೀತವಾಗಿದೆ. ಒಬ್ಬಳು ಸಖಿ ತಾನಾಗಿಯೇ ಕೃಷ್ಣನೊಡನೆ ಸರಸವಾಡಲು ಇಷ್ಟಪಡುವುದಿಲ್ಲ. ಅದಕ್ಕೆ ಬದಲಾಗಿ ರಾಧೆಯನ್ನು ಕೃಷ್ಣನೊಡನೆ ಸೇರಿಸುವುದರಲ್ಲಿಯೆ ಸಂತಸಪಡುವಳು. ಶ್ರೀಕೃಷ್ಣಪ್ರೇಮದ ಲತೆಯೇ ರಾಧೆಯಾದರೆ, ಸಖಿಯರೆಲ್ಲರೂ ಅದರ ಎಲೆಗಳು. ರಾಧಾಕೃಷ್ಣರ ಅನ್ಯೋನ್ಯ ಪ್ರೇಮಭಾವವೇ ಅದಕ್ಕೆ ನೀರುಣಿಸುವುದು. ಅದು ರಾಧೆಗೆ ಮಾತ್ರ ವಲ್ಲದೆ, ಆ ಪ್ರೇಮವೃಕ್ಷದ ಪತ್ರಗಳಂತೆ ಇರುವ ಸಖಿಯರಿಗೆ ಕೂಡ ಅಪಾರ ಆನಂದವನ್ನು ತಂದುಕೊಡುವುದು. ಈ ಬಗೆಯ ಪಾರಸ್ಪರಿಕ ನಿಸ್ವಾರ್ಥ ಪ್ರೇಮವು ಪ್ರೇಮರಸವನ್ನು ಸಶಕ್ತಗೊಳಿಸು ವುದು, ಉದ್ದೀಪನಗೊಳಿಸುವುದು. ಇಂತಹ ಅವ್ಯಾಜ ಪ್ರೇಮವು ಶ್ರೀಕೃಷ್ಣನನ್ನು ಸಂತುಷ್ಟಿಗೊಳಿಸುವುದು.

ಗೋಪಿಯರ ಪ್ರೇಮವನ್ನು ಕಾಮವೆಂದು ಕರೆಯಬಾರದು. ಅದನ್ನು ಅರ್ಥಮಾಡಿಕೊಳ್ಳಲು ಮಾತ್ರ ಕಾಮದ ಭಾಷೆಯನ್ನು ಬಳಸಬೇಕಾಗುತ್ತದೆ. ಮಾನವ ಭಾಷೆಯಲ್ಲಿ ವ್ಯಕ್ತಗೊಳಿಸಲು ಇರುವುದು ಇದೊಂದೇ ಮಾರ್ಗ. ಕಾಮವೆಂದರೆ ತನ್ನ ಇಂದ್ರಿಯಗಳ ಉದ್ದೀಪನದಲ್ಲಿ ಸುಖಿಸುವುದು. ಅದಕ್ಕೆ ವಿರುದ್ಧ ವಾಗಿ ಗೋಪಿಯರು ಕೇವಲ ಕೃಷ್ಣನ ಸುಖವನ್ನು ಬಯಸಿದರೇ ಹೊರತು ತಮ್ಮ ಸುಖಕ್ಕೆ ಆಶೆಪಡಲಿಲ್ಲ.

ಯಾರ ಹೃದಯವು ಗೋಪಿಯರ ಭಾವಾಮೃತದಿಂದ ಮಿಡಿಯುವುದೋ ಅವರು ವೈದಿಕ ಆಚರಣೆಗಳನ್ನೂ ತ್ಯಜಿಸಿ ಕೇವಲ ಕೃಷ್ಣನನ್ನು ಭಜಿಸುವರು. ಶ್ರೀಕೃಷ್ಣನ ಅನುಯಾಯಿಗಳಾದ ವ್ರಜಭೂಮಿಯ ಗೋಪಗೋಪಿಯರು ಆಚರಿಸುತ್ತಿದ್ದ ಈ ರಾಗಾ ಭಕ್ತಿಯ ಮಾರ್ಗವನ್ನು ಅನುಸರಿಸುವರು. ಮುಂದಿನ ಜನ್ಮದಲ್ಲಿ ವ್ರಜಭೂಮಿಯಲ್ಲಿಯೆ, ತಾವು ಯಾರ ಭಾವವನ್ನು ಅನುಸರಿಸಿ ದರೋ ಅದೇ ವ್ಯಕ್ತಿಯಾಗಿ ಜನಿಸಿ, ಕೃಷ್ಣನನ್ನು ಹೊಂದುವರು. ಹೀಗಾಗಿ ರಾಧಾಕೃಷ್ಣರ ಪ್ರೇಮಮಿಲನವನ್ನು ಧ್ಯಾನಿಸಿದರೆ, ನಾವೂ ಸಖಿಯರಾಗಿ ಜನಿಸುವೆವು. ಶ್ರೀಕೃಷ್ಣನನ್ನು ನೀವು ಎಷ್ಟೇ ದೊಡ್ಡ ದೈವವೆಂದು ತಿಳಿದು ಆರಾಧಿಸಿದರೂ ಅವನನ್ನು ಹೊಂದ ಲಾರಿರಿ. ಗೋಪಿಯರಂತೆ, ಸಖಿಯಾಗಿ ಅವನನ್ನು ಸೇವಿಸುವುದ ರಿಂದ ಮಾತ್ರವೇ ಅವನನ್ನು ಹೊಂದಲು ಸಾಧ್ಯ. ನಮ್ಮ ಆಧ್ಯಾತ್ಮಿಕ ಭಾವದಲ್ಲಿ ನಾವು ಸಖಿಯರಾಗಿ ಶ್ರೀಕೃಷ್ಣನಿಗೆ ಸೇವೆ ಸಲ್ಲಿಸುವಂತೆ ಧ್ಯಾನಿಸಿದರೆ, ಮುಂದಿನ ಜನ್ಮದಲ್ಲಿ ಸಖಿಯರಾಗಿಯೇ ಹುಟ್ಟಿ ರಾಧಾಕೃಷ್ಣರ ಪಾದಪದ್ಮಗಳಲ್ಲಿ ಆಶ್ರಯವನ್ನು ಪಡೆಯುವೆವು. ಇದಿಷ್ಟು ಶ್ರೀಚೈತನ್ಯರು ರಾಮಾನಂದ ರಾಯ್ ಜೊತೆಯಲ್ಲಿ ಮಾತನಾಡಿದ ವಿಚಾರ.

(ಮುಂದುವರಿಯುವುದು)